# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 10/2019**

**ದೋ.ಸಾ. : 34 ಫ್ರಾ.ಸಾ. : 13**

| | | |
|---|---|---|
| ಸಾಕ್ಷಿಯ ಹೆಸರು | : | ಮಹಮ್ಮದ್ ರಫಿಕ್ ಫಕ್ರುದ್ದಿನ್ ಶೇಖ್ |
| ತಂದೆಯ ಹೆಸರು | : | ಫಕ್ರುದ್ದಿನ್ ಶೇಖ್ |
| ವಯಸ್ಸು | : | 52 ವರ್ಷ |
| ಕೆಲಸ | : | ಮೆಕ್ಯಾನಿಕ್ ಕೆಲಸ |
| ವಾಸ | : | ಹುಲಿ ದೇವರವಾಡ, ಅಂಕೋಲಾ |

**ದಿನಾಂಕಃ 22-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ಸುಮಾರು 15 ವರ್ಷಗಳಿಂದ ಅಂಕೋಲಾದ ಕೆ.ಇ.ಬಿ ಹತ್ತಿರ ಶಾಂತಿ ಸಾಗರ ಹೋಟೆಲ್ ನ ಬದಿಯಲ್ಲಿ ನಾನು ಸ್ವಂತ ಗ್ಯಾರೇಜ್ ನಡೆಸುತ್ತಿರುತ್ತೇನೆ ಹಾಗೂ ನನ್ನ ಗ್ಯಾರೇಜ್ ಗೆ ಬಂದಂತಹ ವಾಹನಗಳನ್ನು ರಿಪೇರಿ ಮಾಡಿಕೊಡುತ್ತೇನೆ. ಬಿಣಗಾದ ಸತೀಶ ಮಾಳಸೇಕರ್ ರವರು ನನಗೆ ಗೊತ್ತು, ನಾನು ಅವರ ಟ್ರಕ್ ಗಳನ್ನು ರಿಪೇರಿ ಮಾಡಿಕೊಡುತ್ತಿದ್ದೆ. 1 ನೇ ಆರೋಪಿ ನನಗ ಗೊತ್ತು, ಆತನನ್ನು ಸತೀಶ ಮಾಳಸೇಕರ್ ರವರು ಪರಿಚಯ ಮಾಡಿಸಿರುತ್ತಾರೆ ಹಾಗೂ ಆತನೂ ಸಹ ತನ್ನ ಲಾರಿಗಳನ್ನು ರಿಪೇರಿಗಾಗಿ ನನ್ನ ಬಳಿ ಕೊಡುತ್ತಿದ್ದರು. ನಾನು ಚಿಕ್ಕ ವಯಸ್ಸಿನಿಂದಲೂ ಬೇರೆಯವರ ಗ್ಯಾರೇಜ್ ನಲ್ಲಿ ವಾಹನಗಳ ರಿಪೇರಿ ಮಾಡುತ್ತಿದ್ದರಿಂದ ನನಗೆ ವಾಹನಗಳ ರಿಪೇರಿ ಮಾಡುವ ಅನುಭವ ಇರುತ್ತದೆ. 2018 ರ 2 ವರ್ಷಗಳ ಹಿಂದಿನಿಂದಲೂ 1 ನೇ ಆರೋಪಿ ತನ್ನ ಟ್ರಕ್ ಗಳನ್ನು ನನ್ನ ಬಳಿ ರಿಪೇರಿಗಾಗಿ ಕೊಡುತ್ತಿದ್ದನು.

2. ದಿಃ 18-10-2018 ರಂದು ನಮ್ಮ ಮನೆಯ ಪಕ್ಕದಲ್ಲಿರುವ ಬಾಲವಾಡಿ ಶಾಲೆಯಲ್ಲಿ ಸರಸ್ವತಿ ಪೂಜೆ ಇದ್ದು, ಆ ದಿನ ನಾನು ಪೂಜೆ ನಡೆಯುತ್ತಿದ್ದ ಜಾಗದಲ್ಲಿದ್ದು, ರಾತ್ರಿ 09-55 ರ ಸುಮಾರಿಗೆ 1 ನೇ ಆರೋಪಿ ನನ್ನ ಮೊಬೈಲ್ ಗೆ ಕರೆ ಮಾಡಿ, ನಿನ್ನ ಜೊತೆ ಮಾತನಾಡುವುದು ಇದೆ, ಹೊರಗೆ ಬಾ ಎಂದು ಹೇಳಿರುತ್ತಾನೆ, ನಂತರ ನಾನು ಹೊರಗೆ ರಸ್ತೆಯ ಮೇಲೆ ಬಂದಾಗ, 1 ನೇ ಆರೋಪಿಯು ಕಾರ್ ನಿಂದ ಇಳಿದು, ನನ್ನ ಬಳಿ ಬಂದು, ನನ್ನ ಮೊಬೈಲ್ ಕೊಡುವಂತೆ

ಕೇಳಿರುತ್ತಾನೆ, ಆಗ ನಾನು ಯಾಕೆ ಎಂದು ಕೇಳಿದಾಗ, ಆತ "ನನಗೆ ಯಾರೋ ಒಬ್ಬರು ಹಣ ಕೊಡುವುದು ಇದೆ, ಆತ ನನ್ನ ಕರೆಗಳನ್ನು ಸ್ವೀಕರಿಸುತ್ತಿಲ್ಲ, ಆದ್ದರಿಂದ ನಿನ್ನ ಮೊಬೈಲ್ ಕೊಡು" ಎಂದು ಕೇಳಿರುತ್ತಾನೆ. ಆಗ ನಾನು 1 ನೇ ಆರೋಪಿಗೆ ನಾನು ನನ್ನ ಮೊಬೈಲ್ ನೀಡಿದ್ದು, ಆತ ನನ್ನ ಮೊಬೈಲ್ ನಿಂದ ಕರೆ ಮಾಡಿ, ಮಾತನಾಡುತ್ತಾ ಅಲ್ಲಿಂದ ಸ್ವಲ್ಪ ದೂರ ಹೋದ, ಆ ನಂತರ ಸುಮಾರು 15 ನಿಮಿಷಗಳ ನಂತರ 1 ನೇ ಆರೋಪಿ ನನ್ನ ಮೊಬೈಲ್ ನ್ನು ವಾಸಪ್ ನೀಡಿ, ತಾನು ಬಂದಿದ್ದ ಕಾರಿನಲ್ಲಿಯೇ ಹೋಗಿರುತ್ತಾನೆ. ಆ ಸಮಯದಲ್ಲಿ ನನ್ನ ಬಳಿ ಮೊಬೈಲ್ ನಂಃ 98806 68831 ಇತ್ತು.

3. ಸಾಕ್ಷಿಯು ಮೊದಲಿಗೆ 2-3 ದಿನಗಳ ನಂತರ ಎಂದು ಹೇಳಿ, ಆ ನಂತರ ಸರಿಯಾಗಿ ನೆನಪಿಲ್ಲ ಎಂದು ಹೇಳಿ, ಕಾರವಾರ ಪೋಲೀಸರು ನನ್ನನ್ನು ಕಾರವಾರ ಪೊಲೀಸ್ ಠಾಣೆಗೆ ಬರುವಂತೆ ಹೇಳಿರುತ್ತಾರೆ. ಅದರಂತೆ ನಾನು ಕಾರವಾರ ಪೊಲೀಸ್ ಠಾಣೆಗೆ ಬಂದಾಗ ಪೊಲೀಸರು ನನಗೆ "ನಿನ್ನ ಮೊಬೈಲ್ ನ್ನು ಯಾರಿಗೆ ಕೊಟ್ಟಿದ್ದೆ" ಎಂದು ಕೇಳಿದ್ದು, ಆಗ ನಾನು 1 ನೇ ಆರೋಪಿಗೆ ನೀಡಿದ್ದೆ ಎಂದು ಹೇಳಿರುತ್ತೇನೆ. ಆಗ ಪೊಲೀಸರು ಆತ ನಿನಗೆ ಹೇಗೆ ಪರಿಚಯ ಎಂದು ಕೇಳಿದ್ದು, ಈಗ ನಾನು ಮೇಲೆ ಹೇಳಿದಂತೆ ನನಗೆ ಪರಿಚಯ ಇರುತ್ತಾನೆ ಎಂದು ಹೇಳಿರುತ್ತೇನೆ. ನಾನು ಪೊಲೀಸರಿಗೆ ಹೇಳಿದ ವಿಷಯವನ್ನು ಅವರು ಟೈಪ್ ಮಾಡಿಕೊಂಡಿರುತ್ತಾರೆ. ಈಗ ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದ**

4. ನಾನು ನಡೆಸುತ್ತಿರುವ ಗ್ಯಾರೇಜ್ ಗೆ ಯಾವುದೇ ಲೈಸೆನ್ಸ್ ಇರುವುದಿಲ್ಲ. ನಾನು ಮಾಡಿದ ರಿಪೇರಿ ಕೆಲಸಕ್ಕೆ ಯಾವುದೇ ಬಿಲ್ ನೀಡಿರುವುದಿಲ್ಲ. ನಾನು ವಾಹನಗಳನ್ನು ರಿಪೇರಿ ಮಾಡಿ ಕೊಡುವ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ. ನಾನು ಕಾರವಾರ ಪೊಲೀಸ್ ಠಾಣೆಗೆ 2 ಸಲ ಹೋಗಿರುತ್ತೇನೆ. ನಾನು ಠಾಣೆಗೆ ಹೋದಾಗ ಪೊಲೀಸರು ನನ್ನಿಂದ ಮೊಬೈಲ್ ನ್ನು ಪಡೆದುಕೊಂಡು ಚೆಕ್ ಮಾಡಿ, ನಂತರ ಪುನಃ ನನಗೆ ವಾಪಸ್ ನೀಡಿರುತ್ತಾರೆ. ಪೊಲೀಸರು ನನ್ನ ಮೊಬೈಲ್ ಚೆಕ್ ಮಾಡಿದಾಗ, ಏನನ್ನು ಚೆಕ್ ಮಾಡಿದರು ಎಂದು ನನಗೆ ಗೊತ್ತಿಲ್ಲ. ಆ ದಿನ ಬಾಲವಾಡಿ ಶಾಲೆಯಲ್ಲಿ ಸರಸ್ವತಿ ಪೂಜೆಯಲ್ಲಿ ಸುಮಾರು 100 ರಿಂದ 150 ಮಕ್ಕಳು ಸೇರಿದ್ದರು. ಅಲ್ಲಿ ಧ್ವನಿ ವರ್ಧಕಗಳನ್ನು ಅಳವಡಿಸಿದ್ದರು.

5. 1 ನೇ ಆರೋಪಿಯ ಯಾವುದೇ ಮೊಬೈಲ್ ನಂಬರ್ ನನ್ನ ಮೊಬೈಲ್ ನಲ್ಲಿ ಸೇವ್ ಆಗಿರುವುದಿಲ್ಲ, ಆದರೆ ಅವರು ಕರೆ ಮಾಡಿದಾಗ, ಆತ ತನ್ನ ಹೆಸರನ್ನು ಹೇಳುತ್ತಿದ್ದ. ಅಲ್ಲಿ ಧ್ವನಿ ವರ್ಧಕಗಳನ್ನು ಅಳವಡಿಸಿದ್ದರಿಂದ ಅಲ್ಲಿದ್ದ ಜನರು ಏನು ಮಾತನಾಡುತ್ತಿದ್ದರು ಎಂದು ಕೇಳಿಸುತ್ತಿರಲಿಲ್ಲ ಎಂದರೆ ಸರಿ. ಸದರಿ ಸ್ಥಳದಲ್ಲಿ ಗದ್ದಲ ಇದ್ದುದ್ದರಿಂದ 1 ನೇ ಆರೋಪಿ ನನಗೆ ಕರೆ ಮಾಡಿ, ಮಾತನಾಡಿರುವುದು ಕೇಳಿಸುತ್ತಿರಲಿಲ್ಲ ಎಂದರೆ ಸಾಕ್ಷಿಯ ರಿಜ್ವಾನ್ ಮಾತನಾಡಿರುದು ಕೇಳಿಸಿರುತ್ತದೆ ಎಂದು ನುಡಿಯುತ್ತಾರೆ. 1 ನೇ ಆರೋಪಿ ನಿಮಗೆ ಕರೆ ಮಾಡಿದಾಗ ನಿಖರವಾಗಿ ಎಷ್ಟು ಗಂಟೆ ಸಮಯವಾಗಿತ್ತು ಎಂದರೆ ಸಾಕ್ಷಿಯ ರಾತ್ರಿ 10-00 ಗಂಟೆಗಿಂತ 5 ನಿಮಿಷ ಮೊದಲು ಕರೆ ಮಾಡಿರುತ್ತಾನೆ ಎಂದು ನುಡಿಯುತ್ತಾರೆ. 1 ನೇ ಆರೋಪಿ ನನ್ನಿಂದ ಮೊಬೈಲ್ ಪಡೆದುಕೊಂಡು ಯಾರೊಂದಿಗೊ ಏನು ಮಾತನಾಡಿದರು ಎಂದು ನನಗೆ ಗೊತ್ತಿಲ್ಲ. ನಾನು ರಸ್ತೆಯ ಹೊರಗೆ ಬಂದಾಗ ಬೀದಿ ದೀಪ ಇರಲಿಲ್ಲ ಹಾಗೂ 1 ನೇ ಆರೋಪಿ ತನ್ನ ಕಾರನ್ನು ನಿಲ್ಲಿಸಿಟ್ಟ ಸ್ಥಳವು ಕತ್ತಲಾಗಿತ್ತು. 1 ನೇ ಆರೋಪಿ ನನ್ನ ಮೊಬೈಲ್ ನಲ್ಲಿ ಮಾತನಾಡುತ್ತಾ, ತನ್ನ ಕಾರಿನ ಬಳಿ ಹೋಗಿ ವಾಪಸ್ ಬಂದಿರುತ್ತಾನೆ. ಅಲ್ಲಿ ಕತ್ತಲು ಇದ್ದುದ್ದರಿಂದ ಆತ ಮಾತನಾಡುತ್ತಿದ್ದನಾ? ಅಥವಾ ಇಲ್ಲವಾ ಎಂದು ನಾನು ನೋಡಿರುವುದಿಲ್ಲ. ಅದೇ ರೀತಿ ಕತ್ತಲು ಇದ್ದುದ್ದರಿಂದ 1 ನೇ ಆರೋಪಿ ಡೈಯಲ್ ಮಾಡಿದ್ದು, ನನಗೆ ಕಾಣುತ್ತಿರಲಿಲ್ಲ ಎಂದರೆ ಸರಿ.

6. 1 ನೇ ಆರೋಪಿ ನನ್ನ ಬಳಿ ಬಂದಿಲ್ಲ ಹಾಗೂ ನನ್ನ ಮೊಬೈಲ್ ನಿಂದ ಯಾರಿಗೂ ಕರೆ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಯಾವುದೇ ಗ್ಯಾರೇಜ್ ಇರುವುದಿಲ್ಲ ಹಾಗೂ 1 ನೇ ಆರೋಪಿಯ ಪರಿಚಯ ಇರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ನನಗೆ ಹೆದರಿಸಿರುವುದರಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿಗಳ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದ</u>**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**<u>ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ಎನ್.ವಿ.ಎನ್ ವಕೀಲರಿಂದ</u>**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**<u>ಪಾಟೀ ಸವಾಲುಃ 5 ನೇ ಆರೋಪಿ ಪರ ಶ್ರೀ ಹೆಚ್.ಎಸ್.ಎಸ್.ವಕೀಲರಿಂದ</u>**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ